ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

**DIRECTORATE OF MEDICAL EDUCATION**

ಆನಂದರಾವ್ ವೃತ್ತ, ಬೆಂಗಳೂರು-9.
Ananda Rao Circle, Bangalore-9.
Email:dmekarnataka@yahoo.com.n
Ph: 080-22870060

ಸಂಖ್ಯೆ: ವೈಶಿ/ಎಸ್‌ಆರ್‌ಓ(1)/72/2019-20 Date: 06-11-2019

## ತಿದ್ದುಪಡಿ ಅಧಿಸೂಚನೆ

**ವಿಷಯ** ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ. ಇಲ್ಲಿನ ನಿರ್ದೇಶಕರ ಹುದ್ದೆಗೆ ಹೊರಡಿಸಿದ್ದ ಅಧಿಸೂಚನೆಯನ್ನು ತಾತ್ಕಾಲಿಕವಾಗಿ ಹಿಂಪಡೆಯುವ ಬಗ್ಗೆ,

**ಉಲ್ಲೇಖ 1** ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 566 ಎಂಎಂಸಿ 2019 ದಿನಾಂಕ: 31-10-2019,

**2** ಈ ನಿರ್ದೇಶನಾಲಯದ ಸಮಸಂಖ್ಯೆ ಅಧಿಸೂಚನೆ ದಿನಾಂಕ: 02-11-2019,

*****

ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 566 ಎಂಎಂಸಿ 2019 ದಿನಾಂಕ: 31-10-2019ರ ಪತ್ರವನ್ನು ನಿರ್ದೇಶನಾಲಯಕ್ಕೆ ಕಳುಹಿಸುತ್ತಾ ಸ್ವಾಯುತ್ತ ಸಂಸ್ಥೆಗಳು/ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಗಳಿಗೆ ಖಾಯಂ ನಿರ್ದೇಶಕರನ್ನು ನೇಮಕ ಮಾಡಲು ಕಾಲಾನುಕ್ರಮಣಿಕೆ (calendar of events) ಪ್ರಕಾರ ಅರ್ಜಿಗಳನ್ನು ಆಹ್ವಾನಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿತ್ತು.

ಅದರಂತೆ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ. ಇಲ್ಲಿನ ನಿರ್ದೇಶಕರ ಹುದ್ದೆಗೂ ಕೂಡ ಅಧಿಸೂಚನೆ ಹೊರಡಿಸಲಾಗಿತ್ತು ಆದರೆ ಸದರಿ ಸಂಸ್ಥೆಗೆ ಸಂಬಂಧಿಸಿದಂತೆ ಹಿಂದಿನ ನಿರ್ದೇಶಕರಾದ ಡಾ॥ ಶಂಕರ್ ಎಂ ಮಲಪುರೆ ರವರು ಧಾರವಾಡ ಪೀಠ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 105899/2018 ಮತ್ತು 107089/2018 ನ್ನು ದಾಖಲಿಸಿರುತ್ತಾರೆ, ಸದರಿ ಪ್ರಕರಣವು ದಿನಾಂಕ: 23-11-2018 ರಂದು ವಿಚಾರಣೆಗೆ ಬಂದಿದ್ದು, ಮಾನ್ಯ ನ್ಯಾಯಾಲಯವು ಪ್ರತಿವಾದಿಗಳು ಅವಕ್ಷೇಪ (precipitate) ಮಾಡಬಾರದೆಂದು ನಿರ್ದೇಶನ ನೀಡಿರುತ್ತದೆ, ಈ ಹಿನ್ನಲೆಯಲ್ಲಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಖಾಯಂ ನಿರ್ದೇಶಕರ ಹುದ್ದೆಗೆ ಆಹ್ವಾನಿಸಿರುವ ಅಧಿಸೂಚನೆಯನ್ನು ಹಿಂಪಡೆಯುವಂತೆ ಸರ್ಕಾರದ ಉಲ್ಲೇಖಿತ(1)ರ ಪತ್ರದಲ್ಲಿ ನಿರ್ದೇಶಿಸಲಾಗಿದೆ, ಅದರಂತೆ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ. ಮತ್ತು ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಾರವಾರ ಇಲ್ಲಿನ ನಿರ್ದೇಶಕರ ಹುದ್ದೆಗೆ ದಿನಾಂಕ:21-11-2018ರಂದು ಹೊರಡಿಸಿದ್ದ ಅಧಿಸೂಚನೆ ಸಂಖ್ಯೆ:ವೈಶಿ/ಎಸ್‌ಆರ್‌ಓ(1)/57/2018-19 ರಲ್ಲಿ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಬಹುದಾಗಿದ್ದು ಅರ್ಜಿ ಶುಲ್ಕ ಪಾವತಿಸುವಂತಿರುವುದಿಲ್ಲ ಉಳಿದಂತೆ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.

ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು

Director of Medical Education
Ananda Rao Circle, Bangalore

ಪ್ರತಿಯನ್ನು:
ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ ಇವರಿಗೆ
ನಿರ್ದೇಶಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ ಇವರಿಗೆ